ಕೊನೆಯುಸಿರಿನವರೆಗೂ ಚೈತನ್ಯಮೂರ್ತಿಯಾಗಿಯೇ ಇದ್ದು, ೮-೯-೧೯೩೯ರ ಶುಕ್ರವಾರದಂದು, ತಮ್ಮ ೭೩ನೆಯ ವಯಸ್ಸಿನಲ್ಲಿ ವಿಶ್ವಾತ್ಮನಲ್ಲಿ ಒಂದಾಗಿಬಿಟ್ಟರು.

### ನೀತಿಮಾರ್ಗನಿರೂಪಣೆ

ಭಗವಂತನ ಚೈತನ್ಯವೇ ಎಲ್ಲೆಡೆ ಕೆಲಸಮಾಡುತ್ತಿದೆಯೆಂಬುದನ್ನು ಅರಿಯಬೇಕು. ಅವನ ಮೇಲೆಯೇ ಭಾರಹಾಕಬೇಕು. ಭಗವಂತನು ಸಾಕಾರನೂ ಹೌದು, ನಿರಾಕಾರನೂ ಹೌದು, ಅವುಗಳಿಗಿಂತ ಅತೀತವಾದವನೂ ಹೌದು ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು.

"ಇತರ ದೇಶದ ಪ್ರವಾದಿಗಳಲ್ಲಿ, ಸಂತರಲ್ಲಿ ದಿವ್ಯತೆಯನ್ನು ನಾವು ಕಾಣಲಾರದೆ ಹೋದರೆ, ನಾವು ನಮ್ಮ ಪ್ರವಾದಿಗಳ, ಸಂತರ ದಿವ್ಯತೆಯನ್ನು ಕಂಡಿರುವುದಿಲ್ಲ ಎಂದರ್ಥ" ಎಂದು ಅಭೇದಾನಂದರು ಪಾಶ್ಚಾತ್ಯ ಜಗತ್ತಿಗೆ ನೀಡಿದ ಸಂದೇಶವನ್ನು ಎಲ್ಲ ಕಾಲಕ್ಕೂ ಎಲ್ಲರೂ ನೆನಪಿನಲ್ಲಿಡಬೇಕು.

ಸತ್ಯವನ್ನು ಎತ್ತಿಹಿಡಿಯುವವರಿಗೆ ಯಾವಾಗಲೂ ಎಡರು ತೊಡರುಗಳು ಹೆಚ್ಚು. ಹಾಗೆಂದು ಸತ್ಯಮಾರ್ಗವನ್ನು ತೊರೆಯ ಕೂಡದು.

ನಾವು ಮಾಡುವ ಕೆಲಸಕಾರ್ಯಗಳಲ್ಲಿ ಮೇಲು ಕೀಳೆಂಬ ಭಾವನೆಯನ್ನು ಇಟ್ಟುಕೊಳ್ಳಬಾರದು. "ನಾಯಿಗಳಿಗೆ ಸ್ನಾನ ಮಾಡಿಸಿದೆ, ಎಲೆಕೋಸು ಬೀಜಗಳನ್ನು ನೆಟ್ಟೆ, ಕುದುರೆಲಾಯದ ಕೆಲಸ ಮಾಡಿದೆ, ಸೌದೆ ಸೀಳಿದೆ, ಸಂಜೆ ತರಗತಿ ನಡೆಸಿದೆ" ಎಂದು ಸ್ವಾಮಿಗಳೇ ತಮ್ಮ ದಿನಚರಿಯಲ್ಲಿ ಬರೆದಿರುವುದನ್ನು ಈ ಹಿನ್ನೆಲೆಯಲ್ಲಿ ಪರಿಭಾವಿಸಬೇಕು.

ಸ್ವಾರ್ಥರಹಿತ ಜೀವನವನ್ನು ನಡೆಸುತ್ತ, ಈ ಜನ್ಮದಲ್ಲಿಯೇ ಪರಿಪೂರ್ಣರಾಗಿ ಮೃತ್ಯುವನ್ನು ನಿರ್ಭಯವಾಗಿ ಆಲಂಗಿಸಿಕೊಂಡು, ಅದನ್ನು ಗೆದ್ದುಬಿಡಬೇಕು.

"ತಪಸ್ಸು ಇಚ್ಛಾಶಕ್ತಿಯನ್ನು ವೃದ್ಧಿಸುತ್ತದೆ, ಆತ್ಮವಿಶ್ವಾಸವಿಟ್ಟುಕೊಳ್ಳಿ, ನಿಮ್ಮಲ್ಲಿ ನಿಮಗೆ ನಂಬಿಕೆ ಇರಲಿ" ಎಂಬುದು ಅವರು ನೀಡಿದ ಕೊನೆಗಾಲದ ಉಪದೇಶವಾಗಿತ್ತು. ✦

## ರಾಮಕೃಷ್ಣ ಮಿಷನ್ ಹುಟ್ಟಿದ್ದು ಹೇಗೆ?

**ಸ್ವಾಮಿ ಪುರುಷೋತ್ತಮಾನಂದ**

**ಸ್ವಾ**ಮಿ ವಿವೇಕಾನಂದರು ಕಲ್ಕತ್ತಕ್ಕೆ ಬಂದಾಗಲೆಲ್ಲ ಬಲರಾಮ ಬಾಬುವಿನ ಮನೆಯಲ್ಲಿ ಕೆಲಕಾಲ ನಿಲ್ಲುತ್ತಿದ್ದರು. ಅಲ್ಲಿ ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರು ಹಾಗೂ ಗೃಹಸ್ಥ ಶಿಷ್ಯರು ಒಟ್ಟಾಗಿ ಕಲೆತು ವಿಶ್ವಾಸದಿಂದ ಭಾವವಿನಿಮಯ ಮಾಡಿಕೊಳ್ಳುತ್ತಿದ್ದರು. ಈಗ ಡಾರ್ಜಿಲಿಂಗಿನಿಂದ ಹಿಂದಿರುಗಿದ ಸ್ವಾಮೀಜಿ, ಎಲ್ಲ ಸಂನ್ಯಾಸೀ ಶಿಷ್ಯರ ಹಾಗೂ ಗೃಹೀಭಕ್ತರ ಸಭೆಯೊಂದನ್ನು ಕರೆದರು. ಆಧ್ಯಾತ್ಮಿಕ ಹಾಗೂ ಲೌಕಿಕ ಕ್ಷೇತ್ರಗಳಲ್ಲಿ ಬೇರೆ ಬೇರೆ ಸ್ತರಗಳಲ್ಲಿ ಜನ ಸೇವೆ ಸಲ್ಲಿಸುವುದಕ್ಕಾಗಿ ಒಂದು ಸಂಘವನ್ನು ಸ್ಥಾಪಿಸಬೇಕು ಮತ್ತು ಆ ಸಂಘದ ಸೇವಾಕಾರ್ಯದಲ್ಲಿ ಸಂನ್ಯಾಸಿಗಳು, ಭಕ್ತರು ಹಾಗೂ ಸಾರ್ವಜನಿಕರು ಭಾಗವಹಿಸುವಂತಿರಬೇಕು ಎಂಬುದು ಸ್ವಾಮೀಜಿಯವರ ಮಹದಾಸೆಯಾಗಿತ್ತು.

೧೮೯೭ ಮೇ ೧ ನೇ ತಾರೀಕು ಶನಿವಾರ ಬಲರಾಮ ಬಾಬುವಿನ ಮನೆಯಲ್ಲಿ ಸಭೆ ಸೇರಿತು. ಅಲ್ಲಿ ನೆರೆದಿದ್ದವರನ್ನು ಉದ್ದೇಶಿಸಿ ಸ್ವಾಮೀಜಿ ಮಾತನಾಡಲಾರಂಭಿಸಿದರು: "ದೇಶದೇಶಾಂತರಗಳನ್ನು ಸಂಚರಿಸಿ ಬಂದ ನಾನು ಈಗ ಒಂದು ತೀರ್ಮಾನಕ್ಕೆ ಬಂದಿದ್ದೇನೆ. ಏನೆಂದರೆ, ಸರಿಯಾದ ಸಂಘಟನೆಯಿಲ್ಲದೆ ನಾವು ಯಾವುದೇ ಘನವಾದ ಹಾಗೂ ಶಾಶ್ವತವಾದ ಕಾರ್ಯವನ್ನು ಸಾಧಿಸಲಾರೆವು. ಆದರೆ ಭಾರತದಂತಹ ದೇಶದಲ್ಲಿ, ಅದರಲ್ಲೂ ನಾವು ಈಗಿರುವ ಪರಿಸ್ಥಿತಿಯಲ್ಲಿ, ಎಲ್ಲರಿಗೂ ಸಮಾನವಾದ ಹಕ್ಕುಬಾಧ್ಯತೆಗಳಿರುವಂತಹ, ಬಹುಮತದಿಂದ ನಿರ್ಧಾರಗಳನ್ನು ಕೈಗೊಳ್ಳುವಂತಹ ಪ್ರಜಾಪ್ರಭುತ್ವದ ರೀತಿಯ ಸಂಘವನ್ನು ಸ್ಥಾಪಿಸುವುದು ತರವಲ್ಲವೆಂದು ನನಗನ್ನಿಸುತ್ತದೆ. ಪಾಶ್ಚಾತ್ಯರಾಷ್ಟ್ರಗಳ ವಿಷಯವೇ ಬೇರೆ. ನಮ್ಮ ರಾಷ್ಟ್ರದಲ್ಲೂ ಕೂಡ ವಿದ್ಯಾಭ್ಯಾಸವು ಸಾಕಷ್ಟು ಹರಡಿ, ನಾವು ನಮ್ಮ ಸ್ವಾರ್ಥವನ್ನು ತ್ಯಾಗಮಾಡಲು ಕಲಿತಾಗ ಮತ್ತು ನಾವು ನಮ್ಮ ವೈಯಕ್ತಿಕ ಆಶೋತ್ತರಗಳನ್ನು ಮೀರಿ ವಿಶಾಲಭಾರತದ ಹಿತದ ಕಡೆಗೆ ಗಮನ ಹರಿಸಬಲ್ಲವರಾದಾಗ, ನಾವೂ ಕೂಡ ಪ್ರಜಾಪ್ರಭುತ್ವದ ತತ್ತ್ವದ ಮೇಲೆ ಕಾರ್ಯನಿರ್ವಹಿಸಲು ಸಾಧ್ಯವಾಗಬಹುದು. ಆದ್ದರಿಂದ ಈಗ ನಮ್ಮ ಸಂಘಕ್ಕೆ ಒಬ್ಬರು ನಿರ್ದೇಶಕರಿರಬೇಕು ಮತ್ತು ಆ ನಿರ್ದೇಶಕರ ಆಜ್ಞೆಗೆ ಸರ್ವರೂ ವಿಧೇಯರಾಗಿರಬೇಕು. ಬಳಿಕ ಸಕಾಲದಲ್ಲಿ ಈ ಸಂಘವು ಅದರ ಸಮಸ್ತ ಸದಸ್ಯರ ಅಭಿಪ್ರಾಯ ಹಾಗೂ ಸಮ್ಮತಿಯ ಮೇರೆಗೆ ನಡೆದುಕೊಂಡು ಬರುವಂತಾಗುತ್ತದೆ.

"ಈ ಸಂಘವು, ನಾವು ಯಾರ ಹೆಸರಿನಲ್ಲಿ ಸರ್ವಸಂಗಪರಿತ್ಯಾಗ ಮಾಡಿ ಸಂನ್ಯಾಸಿಗಳಾಗಿರುವೆವೋ, ಯಾರನ್ನು ನೀವು (ಗೃಹಸ್ಥರು) ನಿಮ್ಮ ಜೀವನಾದರ್ಶನವನ್ನಾಗಿ ಮಾಡಿಕೊಂಡು ಈ ಜಗತ್ತಿನಲ್ಲಿ ಗೃಹಸ್ಥಧರ್ಮವನ್ನು ನಿರ್ವಹಿಸುತ್ತಿರುವಿರೋ, ಯಾರ ಪವಿತ್ರನಾಮವು ಮತ್ತು ಯಾರ ಅಸದೃಶ ಅದ್ಭುತಜೀವನದ ಪ್ರಭಾವವು ಅವರು ಪರಿನಿರ್ವಾಣ ಹೊಂದಿದ ಕೇವಲ ಹನ್ನೆರಡೇ ವರ್ಷಗಳಲ್ಲಿ ಪ್ರಾಚ್ಯ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಯಾರೂ ಊಹಿಸಿರದಿದ್ದ ರೀತಿಯಲ್ಲಿ ಹರಡಿತೋ, ಅಂಥವರ ಹೆಸರನ್ನು ಧರಿಸುತ್ತದೆ. ಆದ್ದರಿಂದ ಈ ಸಂಘಕ್ಕೆ **'ರಾಮಕೃಷ್ಣ ಮಿಷನ್'** ಎಂಬ ಹೆಸರಾಗಲಿ. ನಾವು ಆ ಪ್ರಭುವಿನ ಕೇವಲ ಸೇವಕರು ಮಾತ್ರ. ಈ ಉದ್ದೇಶದತ್ತ ನಿಮ್ಮೆಲ್ಲರ ನಲ್ಮೆಯ ಸಹಕಾರ ಹರಿದುಬರಲಿ!" ಸ್ವಾಮೀಜಿಯವರ ಈ ಸಲಹೆಯನ್ನು ಸರ್ವರೂ ಅತ್ಯುತ್ಸಾಹದಿಂದ ಸ್ವಾಗತಿಸಿದರು. ಈ ನಿರ್ಣಯವೂ ಸರ್ವಾನುಮತದಿಂದ ಅಂಗೀಕೃತವಾಯಿತು. ಬಳಿಕ ಮುಂದಿನ ಕಾರ್ಯವಿಧಾನದ ಬಗ್ಗೆ ಸಾಕಷ್ಟು ವಿಚಾರವಿನಿಮಯ ನಡೆಯಿತು. **ಅಂತೂ ಹೀಗೆ ೧೮೯೭ರ ಮೇ ೧ರಂದು ರಾಮಕೃಷ್ಣ ಮಿಷನ್ ಸಂಸ್ಥೆ ಜನ್ಮತಾಳಿತೆಂದು ಹೇಳಬಹುದು.** (ಆಧಾರ: **ವಿಶ್ವಮಾನವ ವಿವೇಕಾನಂದ**)

# ವಿದ್ಯಾರ್ಥಿಗಳಿಗಾಗಿ ಪಂಚಶೀಲ

ಸ್ವಾಮಿ ಜಗದಾತ್ಮಾನಂದ

## ೪. ನೀತಿ

ನೀತಿಯೆನ್ನುವುದು ಈ ಗುಣಗಳನ್ನು ಹೊಂದಿದೆ: **{ಅ} ಸತ್ಯ, ಅಹಿಂಸೆ, ಬ್ರಹ್ಮಚರ್ಯಗಳೇ ಮೊದಲಾದ ವ್ಯಕ್ತಿಗತ ಸಾಮಾನ್ಯ ನೈತಿಕ ಸೂತ್ರಗಳು. {ಆ} ಗುರುಹಿರಿಯರಿಗೆ ಗೌರವ, ಪರಿಶ್ರಮದಲ್ಲಿ ಗೌರವ, ಯಾರನ್ನೂ ಶೋಷಿಸದ ಪ್ರವೃತ್ತಿ ಮೊದಲಾದ ಸಾಮಾಜಿಕ ಸೂತ್ರಗಳು.{ಇ} ದೇಶಭಕ್ತಿ, ಧರ್ಮಸಮನ್ವಯ ದೃಷ್ಟಿ, ಅಂತಾರಾಷ್ಟ್ರೀಯ ಅರಿವು, ಇವೇ ಮೊದಲಾದ ಸಾಮೂಹಿಕ ನೈತಿಕ ಸೂತ್ರಗಳು.**

ಸತ್ಯಪ್ರಿಯತೆ, ನ್ಯಾಯಪರಾಯಣತೆ, ಪರೋಪಕಾರ ಬುದ್ಧಿ, ಆತ್ಮಸಂಯಮ ಮೊದಲಾದ ಗುಣಗಳನ್ನು ಎಲ್ಲ ಧರ್ಮ ಬೋಧಕರೂ ಕೊಂಡಾಡುತ್ತಾರೆ. ಸ್ವೇಚ್ಛಾಚಾರದ ಬದುಕನ್ನು ಯಾರೂ ಒಪ್ಪಲಾರರು. 'ವ್ಯಕ್ತಿಯ ಅಭ್ಯುದಯ' ಮತ್ತು 'ಸಮಾಜಕಲ್ಯಾಣ' ಎಂಬ ಎರಡು ಫಲಗಳನ್ನು ನೀಡುವ, ಅನುಷ್ಠಾನಯೋಗ್ಯವಾದ ಹತ್ತು ನಿಯಮಗಳನ್ನು 'ಯಮ' ಮತ್ತು 'ನಿಯಮ'ಗಳೆಂದು ಯೋಗವು ವಿವರಿಸುತ್ತದೆ. *ದುರಾಸೆ, ಸ್ತೇಯ* (ಕಳ್ಳತನ), *ಲಂಪಟತನ, ಸುಳ್ಳು ಹೇಳುವುದು* ಮತ್ತು *ಹಿಂಸೆ* – ಈ ಐದರಿಂದ ಮನಸ್ಸನ್ನು ಹಿಂತೆಗೆಯುವುದು **ಯಮ** ಎಂಬ ಮೊದಲನೆಯ ಹಂತ. *ಶೌಚ* (ಅಂತರಂಗ–ಬಹಿರಂಗದ ಸ್ವಚ್ಛತೆ), *ಸಂತೋಷ* (ತೃಪ್ತಿ), *ತಪಸ್ಸು* (ಆತ್ಮಸಂಯಮ), *ಸ್ವಾಧ್ಯಾಯ* (ಅಧ್ಯಯನಶೀಲತೆ), *ಈಶ್ವರಪ್ರಣಿಧಾನ* (ಭಗವಚ್ಚಿಂತನೆ) ಇವುಗಳಲ್ಲಿ ಮನಸ್ಸನ್ನು ತೊಡಗಿಸುವುದು **ನಿಯಮ** ಎಂಬ ಎರಡನೆಯ ಹಂತ. ಧಾರ್ಮಿಕ ಆಸಕ್ತಿ ಇಲ್ಲದಿದ್ದರೂ, ಕೇವಲ ಮನಸ್ಸನ್ನು ಚುರುಕಾಗಿಸುವ ಮತ್ತು ಚಿಂತನೆಯ ಸ್ಪಷ್ಟತೆಯನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಯೋಗಾಭ್ಯಾಸ ಮಾಡುವವರೂ, ಅದರಲ್ಲಿ ಯಶಸ್ವಿಯಾಗಲು ನೈತಿಕವಾಗಿ ನಡೆದುಕೊಳ್ಳುವುದು ಬಹಳ ಅವಶ್ಯಕ. ದೇಹವನ್ನು ಸ್ಥಿರವಾಗಿಸುವ **ಆಸನ,** ಮನಸ್ಸನ್ನು ಸ್ಥಿರವಾಗಿಸುವ **ಪ್ರಾಣಾಯಾಮ** ಅನಂತರದ ಹಂತಗಳು. ಇದರ ಮುಂದಿನ ಹಂತ, ಮಹಾತ್ಮ ಗಾಂಧಿಯವರು ಹೇಳುವಂತೆ, 'ನಿಮ್ಮ ಹುಡುಕುದೀಪವನ್ನು ಅಂತರಂಗದೆಡೆಗೆ ತಿರುಗಿಸುವುದು.' ಇದೇ **ಪ್ರತ್ಯಾಹಾರ.** ತನ್ನ ಗ್ರಹಿಕೆಯ ಬಾಗಿಲುಗಳನ್ನು ಮುಚ್ಚಿದ ಮೇಲೆ, ತನ್ನ ಮನಸ್ಸಿನೊಂದಿಗೆ ಏಕಾಂಗಿಯಾಗಿ ಉಳಿಯುವ ಯೋಗಿಗೆ ಅರಿವಿಲ್ಲದ, ಅರ್ಥಹೀನ ಯೋಚನೆಗಳ ಸರಣಿಯೊಳಗೆ ಮನಸ್ಸು ಜಾರುವುದು ತಪ್ಪಿ, ಗಾಢವಾದ ಏಕಾಗ್ರತೆಯು ಲಭ್ಯವಾಗುತ್ತದೆ. ಕೇಂದ್ರೀಕರಿಸಿದ ವಸ್ತುವಿನಲ್ಲಿಯೇ ಮನಸ್ಸು ಲಯವಾಗಿ, ತಾನೇ ಆ ವಸ್ತುವೆಂಬ ಪ್ರಜ್ಞೆ ಬೆಳೆಯುತ್ತದೆ. ಇದೇ **ಧ್ಯಾನ.** ಜ್ಞಾತೃವು ಜ್ಞೇಯದಲ್ಲಿ ಸಂಪೂರ್ಣವಾಗಿ ಲೀನವಾಗುವ ಧ್ಯಾನದ ಪರಾಕಾಷ್ಠೆಯೇ **ಸಮಾಧಿ**. ಧಾರಣ, ಧ್ಯಾನ, ಸಮಾಧಿಗಳನ್ನು ಒಟ್ಟು ಸೇರಿಸಿ **ಸಂಯಮ** ಎನ್ನುವರು.

ಒಟ್ಟಿನಲ್ಲಿ 'ವೈಯಕ್ತಿಕ ಸಾಮಾನ್ಯ ಸೂತ್ರಗಳನ್ನು' ಅನುಸರಿಸಿ ಮುಂದುವರಿಯುವುದನ್ನು ವಿದ್ಯಾರ್ಥಿಜೀವನದಲ್ಲಿಯೇ ಆರಂಭಿಸಬೇಕು. 'ಧರ್ಮನಿರಪೇಕ್ಷ'ವಾದ ನಮ್ಮ ಪ್ರಚಲಿತ ಶಿಕ್ಷಣದಲ್ಲಿ, ಅದು ಹೇಗೋ 'ನೀತಿನಿರಪೇಕ್ಷೆ'ಯೂ ಸೇರಿಹೋಗಿರುವುದು ಎಂತಹ ವಿಪರ್ಯಾಸ! ವಿವೇಕಾನಂದರು ಹೇಳುತ್ತಾರೆ, "ಈಗ ದೊರೆಯುತ್ತಿರುವ ವಿದ್ಯಾಭ್ಯಾಸ ನಿಷೇಧಭಾವನೆಯ ಮೇಲೆ ನಿಂತಿದೆ. ಮಗುವನ್ನು ಶಾಲೆಗೆ ಕಳುಹಿಸುವಾಗ ಮೊದಲು ಅದು ಕಲಿಯುವುದೇ 'ನನ್ನ ತಂದೆ ಮೂರ್ಖ' ಎಂಬುದನ್ನು, ಎರಡನೆಯದು ಅವನ ತಾತ ಹುಚ್ಚನೆನ್ನುವುದು, ಮೂರನೆಯದೇ ಗುರುಗಳೆಲ್ಲಾ ಆಷಾಢಭೂತಿಗಳು, ನಾಲ್ಕನೆಯದೇ ಪವಿತ್ರ ಶಾಸ್ತ್ರಗಳೆಲ್ಲ ಸುಳ್ಳಿನ ಕಂತೆ ಎನ್ನುವುದು. ಅವನಿಗೆ ಹದಿನಾರು ವರುಷ ತುಂಬುವ ಸಮಯಕ್ಕೆ ಅವನೊಂದು ನಿಷೇಧಭಾವನೆಗಳ ಕಂತೆಯಾಗುವನು. ಇದರ ಪರಿಣಾಮವಾಗಿ ಐವತ್ತು ವರುಷಗಳ (೧೮೯೫ರಲ್ಲಿ) ಇಂತಹ ವಿದ್ಯಾಭ್ಯಾಸದಿಂದ ಮೂರು ಪ್ರಾಂತಗಳಲ್ಲಿ ಸ್ವತಂತ್ರವಾಗಿ ವಿಚಾರಮಾಡುವ ಒಬ್ಬ ವ್ಯಕ್ತಿಯೂ ಮೂಡಿಬಂದಿಲ್ಲ." ಗುರುಹಿರಿಯರ ಬಗೆಗೆ ಗೌರವ ಬೆಳೆಯದಿದ್ದರೆ, ಅವರು ಹೇಳುವ ಮಾತುಗಳು, ಕಲಿಸುವ ವಿದ್ಯೆಯ ಮೇಲೆ ಆಸಕ್ತಿ, ಆದರ ಹುಟ್ಟೀತೆ? ಔದ್ಯೋಗಿಕ ಕೌಶಲಗಳನ್ನು ಪಡೆಯದ ಸಾವಿರಾರು ಪದವೀಧರರನ್ನು ನಾವೀಗ ತಯಾರಿಸುತ್ತಿದ್ದೇವೆ. ಇವರಲ್ಲಿ ಬಹುಮಂದಿ ಯಾವ ಉದ್ಯೋಗಕ್ಕೂ ಅರ್ಹರಲ್ಲ. ತಂದೆತಾಯಿಯರು ಮಕ್ಕಳಿಗೆ ಪರಿಶ್ರಮದ ಬೆಲೆಯ ಬಗ್ಗೆ ಅರಿವು ಮೂಡಿಸುವುದಿಲ್ಲ; ತಾವು ಅನುಭವಿಸಿದ ಕಷ್ಟ ತಮ್ಮ ಮಕ್ಕಳಿಗೆ ಬರಬಾರದೆಂದು, ಯಾವ ಕೆಲಸವನ್ನೂ ಮಾಡಿಸದೆ ಮುದ್ದಿನಿಂದ ಬೆಳೆಸುತ್ತಾರೆ. ಹೀಗಾಗಿ ವಿದ್ಯಾವಂತರು ದೈಹಿಕ ಶ್ರಮ ಪಡಲು ಹಿಂಜರಿಯುತ್ತಾರೆ. ಕೃಷಿಕ್ಷೇತ್ರದಲ್ಲಿ ದುಡಿಯಲು ಯಾರೂ ಉಳಿದಿರದ ಪರಿಸ್ಥಿತಿ ಈಗ ಗ್ರಾಮಾಂತರದಲ್ಲಿ ಸಾಮಾನ್ಯ.

ಹೀಗಾಗಿ, ಇಂದು ಗುರುಹಿರಿಯರಿಗೆ ಬೆಲೆ ಕೊಡುವಂತೆ, ಶ್ರಮಸಂಸ್ಕೃತಿಗೆ ಮಾನ್ಯತೆ ನೀಡುವಂತೆ ಮಕ್ಕಳಿಗೆ ಬೋಧಿಸಬೇಕಾಗಿದೆ. ಪ್ರತ್ಯೇಕ ವ್ಯಕ್ತಿಗಳಾಗಿ ಸ್ವಪ್ರತಿಷ್ಠೆ, ಸ್ವಾರ್ಥದ ದೃಷ್ಟಿಯನ್ನು ಮಾತ್ರ ಹೊಂದಿರುವ ಈಗಿನ ಯುವಪೀಳಿಗೆ ತಮ್ಮ ಸುಖೋಪಭೋಗಕ್ಕೆ ಸಮಾಜವನ್ನೇ ಶೋಷಿಸುವುದಕ್ಕೂ ಮತ್ತು ಎಂತಹ ಭ್ರಷ್ಟತೆಯ ಮಟ್ಟಕ್ಕೆ ಇಳಿಯುವುದಕ್ಕೂ ಹೇಸುವುದಿಲ್ಲ. **ಕುಟುಂಬ, ಸಮಾಜ, ದೇಶ** ಎಂಬ ಪದಗಳು ತಮ್ಮ ಅರ್ಥವನ್ನು ಕಳೆದುಕೊಳ್ಳುವಂತೆ ಆಗಬಾರದಲ್ಲವೆ? ವಿವೇಕಾನಂದರೆನ್ನುವಂತೆ, "ಎಲ್ಲವನ್ನೂ ಪರಿಹಾಸ್ಯ ಮಾಡುವ ಹುಡುಗಾಟಿಕೆಯ ರೋಗ ನಮ್ಮ ರಾಷ್ಟ್ರಜೀವನದ ರಕ್ತವನ್ನು ಹೊಕ್ಕಿದೆ. ಮೊದಲು ಅದನ್ನು ತ್ಯಜಿಸಿ, ಧೀರರಾಗಿ, ಶ್ರದ್ಧಾವಂತರಾಗಿ. ಉಳಿದುದೆಲ್ಲಾ ಸ್ವಾಭಾವಿಕವಾಗಿಯೇ ಸಿದ್ಧಿಸುವುದು... ವಿಶ್ವವಿದ್ಯಾನಿಲಯಗಳು ಪರೀಕ್ಷೆಯನ್ನು ನಡೆಸುವ ಮಂಡಲಿಗಳಾಗಿವೆ. ಎಲ್ಲರ ಹಿತಕ್ಕಾಗಿ ತ್ಯಾಗಮಾಡಬೇಕೆಂಬ ಭಾವನೆ ನಮ್ಮ ದೇಶದಲ್ಲಿ ಇನ್ನೂ